Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 17-09-2022

**ಪತ್ರಿಕಾ ಪ್ರಕಟಣೆ:**

## ಕೆ–ಟೆಕ್ ವತಿಯಿಂದ ಪದವಿಪೂರ್ವ ವಿದ್ಯಾಲಯದಲ್ಲಿ ಔದ್ಯಮಶೀಲತೆಯ ಅರಿವು ಮೂಡಿಸುವ ಕಾರ್ಯಕ್ರಮ

ಕೆ.ಎಲ್.ಎಸ್. ವಿ. ಡಿ. ಐ. ಟಿ. ಹಳಿಯಾಳವು ಕರ್ನಾಟಕ ರಾಜ್ಯ ಸರ್ಕಾರದ ಐಟಿ–ಬಿಟಿ ಇಲಾಖೆಯ ಅಂಗಸಂಸ್ಥೆಯಾದ ಕೆ–ಟೆಕ್ ನ್ಯೂ ಏಜ್ ಇನ್ನೋವೇಶನ್ ನೆಟ್ವರ್ಕ್ಸ್(ನೈನ್) ನ ಯುವ ಔದ್ಯಮಶೀಲ ಕಾರ್ಯಕ್ರಮದ ಅಡಿಯಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗೆ ಔದ್ಯಮಶೀಲತೆಯ ಕುರಿತು ಅರಿವು ಮೂಡಿಸುವ ಒಂದು ದಿನದ ಕಾರ್ಯಾಗಾರವನ್ನು ದಾಂಡೇಲಿಯ ಬಂಗೂರ್ ನಗರ ಪದವಿಪೂರ್ವ ವಿದ್ಯಾಲಯದಲ್ಲಿ ಸಪ್ಟೆಂಬರ್ 15ರಂದು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್ ಸಂಸ್ಥೆಯಿಂದ ಶ್ರೀ. ರಾಕೇಶ್ ಮತ್ತು ಶ್ರೀ. ರಕ್ಷಿತ್ ಕಲ್ಯಾಣಿ ಆಗಮಿಸಿದ್ದರು. ಶ್ರೀ. ರಾಕೇಶ್ ಅವರು ಔದ್ಯಮಶೀಲತೆ ಯಿಂದ ದೇಶದ ಪ್ರಗತಿ, ಉದ್ಯಮ ಪ್ರಾರಂಭಿಸುವ ಹಂತದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸುವ ಬಗೆಯನ್ನು ವಿವರಿಸಿದರು.ಶ್ರೀ. ರಕ್ಷಿತ್ ಕಲ್ಯಾಣಿ ಅವರು ಔದ್ಯಮಶೀಲತೆಯ ವಿವಿಧ ಹಂತಗಳು, ಕಲ್ಪನೆಯನ್ನು ಉತ್ಪನ್ನವಾಗಿ ಪರಿವರ್ತಿಸುವ ಪರಿಯನ್ನು ತೆರೆದಿಟ್ಟರು.

ಪ್ರಾಚಾರ್ಯರಾದ ಡಾ.ವಿ.ಎ.ಕುಲಕರ್ಣಿಯವರು ದೇಶದ ಆರ್ಥಿಕ ಸ್ವಾವಲಂಬನೆಗೆ ಔದ್ಯಮಶೀಲತೆಯ ಪಾತ್ರ ಬಹುಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಮಹಾವಿದ್ಯಾಲಯವು ಕೆ–ಟೆಕ್ ನೈನ್ ಸೂಚನಾನುಸಾರವಾಗಿ ದಾಂಡೇಲಿಯ ಬಂಗೂರ್ ನಗರ ಪದವಿಪೂರ್ವ ವಿದ್ಯಾಲಯವನ್ನು ದತ್ತು ತೆಗೆದುಕೊಂಡಿದ್ದು, ವಿದ್ಯಾರ್ಥಿಗಳಿಗೆ ಔದ್ಯಮಶೀಲತೆಯ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಳ್ಳಲಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ 4ನೇ ವರ್ಷದ ವಿದ್ಯಾರ್ಥಿನಿ ಕುಮಾರಿ. ಪೂಜಾ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿ ಕು. ಕೇಶವ್ ಕೆ–ಟೆಕ್ ನೈನ್ ಅಡಿಯಲ್ಲಿ ತಾವು ಮಾಡಿರುವ ಯೋಜನಾಕಾರ್ಯ ವಿವರಿಸಿದರು.ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ. ಆಶಾಲತಾ ಜೈನ್ ಅವರು ಉದ್ಯಮ ಪ್ರಾರಂಭಿಸುವ ಅಭಿಲಾಷೆ ಹೊಂದಿರುವ ವಿದ್ಯಾರ್ಥಿಗಳಿಗೆ ಈ ಕಾರ್ಯಾಗಾರವು ದಾರಿದೀಪವಾಗಿದ್ದು, ಕಾರ್ಯಕ್ರಮ ಆಯೋಜಿಸಿದ ಮಹಾವಿದ್ಯಾಲಯಕ್ಕೆ ಧನ್ಯವಾದ ತಿಳಿಸಿದರು. ಕೆ–ಟೆಕ್ ನೈನ್ ಸಂಚಾಲಕರಾದ ಡಾ. ಕೆ. ಎಸ್. ಪೂಜಾರ್ ಅವರು ಪದವಿಪೂರ್ವ ವಿದ್ಯಾಲಯದ ಆಡಳಿತ ಮಂಡಳಿ ಹಾಗೂ

ಉಪನ್ಯಾಸಕರ ಸಹಕಾರಕ್ಕೆ ಧನ್ಯವಾದ ಅರ್ಪಿಸಿದರು. ಪ್ರೊ. ನವೀನ್ ಹಿರೇಮಠ ಕಾರ್ಯಕ್ರಮ ಸಂಯೋಜಿಸಿದರು.120ಕ್ಕೂ ಅಧಿಕ ವಿದ್ಯಾರ್ಥಿಗಳು ಸಕ್ರಿಯವಾಗಿ ಕಾರ್ಯಾಗಾರದಲ್ಲಿ ಪಾಲ್ಗೊಂಡರು.

ಪ್ರಾಂಶುಪಾಲರು

**Principal**
KLS Vishwanathrao Deshpande
Institute of Technology, Haliyal


INNOVATION HUB
POWERED BY
STARTUP KARNATAKA
INNOVATION NETWORK
KLS VDIT
Transforming Through Technology
and
STARTUP KARNATAKA | NAIN
KARNATAKA INNOVATION AND TECHNOLOGY SOCIETY (KITS)
DEPARTMENT OF ELECTRONICS IT, BT AND S&T, GOVT. OF KARNATAKA
In association with
BANGUR NAGAR PRE-UNIVERSITY COLLEGE, DANDELI
organizes
YOUNG ENTREPRENEURS PROGRAM (YEP)
Developing an Entrepreneurship Mindset
Bangur Nagar Pre-University College, Dandeli


BANGURNAGAR COMPOSITE PRE-UNIVERSITY
ARTS, SCIENCE AND COMMERCE COLLEGE, DANDELI (U.K)
KLS VDIT